

ಮಂಡಿಯ ಕೆಳಗಿನವರೆಗೂ ಬರೀ ತಾತಾ ತೂತಿ. ಫ್ಯಾನ್ಸಿ ಡ್ರೆಸ್‌ನಂತಿದ್ದ ಅವನ ವಿಚಿತ್ರ ವೇಷ ಕಂಡು ಬೆರಗಾಗಿ ಕಣ್ಣರಳಿಸಿದಳು.

'ಮಾಮ್, ಡ್ಯಾಡ್, ಇಟ್ ಈಸ್ ಮೀ...?'

ಪರಿಚಿತ ಧ್ವನಿ ಕೇಳಿ ಇಬ್ಬರೂ ಕಣ್ಣು ಪಿಳುಕಿಸಿ, ಎದುರಿಗೆ ನಿಂತವನನ್ನು ಅಡಿಯಿಂದ ಮುಡಿಯವರೆಗೂ ದಿಟ್ಟಿಸಿದರು.

'ಏನೋ ನಿನ್ನ ಈ ಅವತಾರ? ಥೂ...' ಮುಖ ಸಿಂಡರಿಸಿದಳು ಕಮ್ಲೂ.

'ಶುರುವಾಯ್ತಲ್ಲ ನಿನ್ನ ವಟವಟ... ಸ್ವಲ್ಪ ಬಾಯಿಗೆ ಜಿಪ್ ಹಾಕ್ಕೋ...' ಎಂದು ಶ್ರೀಕಂಠೂ, ಅವಳ ಬಾಯಿಗೆ ಬ್ರೇಕ್ ಹಾಕಿ, ಮಗನನ್ನು ನಗುತ್ತ ಬರಮಾಡಿಕೊಂಡ.

ದಾರಿಯುದ್ದಕ್ಕೂ ನಕುಲ ಬೆರಗಾಗಿ ಪ್ರಶ್ನೆಗಳನ್ನು ಕೇಳಿದ್ದೇ ಕೇಳಿದ್ದು...

'ಎಷ್ಟೊಂದು ಚೇಂಜ್ ಆಗಿಬಿಟ್ಟಿದೆ ಡ್ಯಾಡಿ ಈ ಊರು? ಗಿಜಿಗಿಜಿ ಜನಗಳು, ವೆಹಿಕಲ್ಸು...'

'ಚೇಂಜ್ ಆಗಿರೋದು ನಿನ್ನ ಅವತಾರ ಕಣೋ...' ಫಾರಿನ್ ರಿಟರ್ನ್ಡ್ ಮಗನಿಗೆ ಗರಮ್ಮಾಗಿ ಉತ್ತರಿಸಿದಳು ಕಮ್ಲೂ.

ಮನೆಯೊಳಗೆ ಕಾಲಿಡುತ್ತಿದ್ದ ಹಾಗೆ ನಕುಲನ ಉವಾಚ, 'ಐ ವಾಂಟ್ ಮಿನರಲ್ ವಾಟರ್ ಮಾಮ್?' ತಟ್ಟನೆ ರೇಗುತ್ತ ಕಮ್ಲೂ, 'ಏಯ್, ಲಕ್ಷಣವಾಗಿ ಮೊದ್ಲು ಅಂತಿದ್ದ ಹಾಗೇ ಅಮ್ಮಾ ಅನ್ನೋ' ಎನ್ನುತ್ತಾ ಅವನ ಮುಂದೆ ಬಿಸಿಲೇರಿ ನೀರಿನ ಬಾಟಲನ್ನು ತಂದಿಟ್ಟಳು.

'ಥ್ಯಾಂಕ್ಯೂ...' ನಕುಲನ ನಯವಾದ ಉಲಿ.

'ಇದೇನೋ ಹೊಸ ಥರ..?' ಕಮ್ಲೂ ವಿಚಿತ್ರವಾಗಿ ದಿಟ್ಟಿಸಿದಳು.

'ಮಾಮ್, ಐ ವಾಂಟ್ ಮೈ ಡಿನ್ನರ್ ಅಟ್ ಎಯ್ಟ್... ಆಯಿಲ್‌ಲೆಸ್ ಚಪಾತಿ ಟೂ, ವೆಜಿಟೆಬಲ್ ಸಲಾಡ್ ಇನಫ್. ಮಾರ್ನಿಂಗ್ ಬ್ರೇಕ್ ಫಾಸ್ಟ್‌ಗೆ ಬ್ರೆಡ್ ಟೋಸ್ಟ್ ಅಂಡ್ ಜ್ಯಾಮ್ ವಿಥ್ ಬಟರ್...'

ಹುಬ್ಬೇರಿಸಿದ ಕಮ್ಲೂ ಗಂಡನತ್ತ ವಾರೆನೋಟ ಕುಲುಕಿಸಿ, 'ಆಹಾ... ಮೊದ್ಲು ಯಾವಾಗಲೂ ಮಸಾಲೆದೋಸೆ, ಇಡ್ಲಿ, ತಾಲೀಪಟ್ಟು, ಅವಲಕ್ಕಿ ಒಗ್ಗರಣೆ, ಕುರುಕಲು ತಿಂಡಿ ಅಂತ ಹಟ ಮಾಡ್ತಿದ್ದೋನು, ಇಷ್ಟು ಬದಲಾವಣೆಯೇ?'

ಕಮ್ಲೂ ಗೊಣಗಾಟಕ್ಕೆ ಶ್ರೀಕಂಠೂ ಸೈಲೆಂಟು.

ಮಗ ವಿದೇಶದಿಂದ ಬರ್ತಾನೆ ಅಂತ ಕನಸು ಕಾಣ್ತಿದ್ದ ಕಮ್ಲೂ, ಅವನ ರೂಮನ್ನು ನೀಟಾಗಿ ಕ್ಲೀನ್ ಮಾಡಿಸಿ, ಚೆನ್ನಾಗಿ ಒಗೆದ ಬೆಡ್‌ಶೀಟ್ ಮತ್ತು ದಿಂಬಿನಚೀಲ ಹಾಕಿ ಹಾಸಿಗೆಯನ್ನು ಶುಭ್ರವಾಗಿ ರೆಡಿ ಮಾಡಿದ್ದಳು. ಫಾರಿನ್ನಿಂದ ಬರೋವವರ ವಿಚಾರ ಅವಳಿಗೆ ಅಷ್ಟಿಷ್ಟು ತಿಳಿದಿತ್ತು. ಮಗ ನಖರ ಮಾಡಬಾರದೂಂತ ಅವಳು ಭಯ ಭಕ್ತಿಯಿಂದ ಈ ಎಲ್ಲ ವ್ಯವಸ್ಥೆಗಳನ್ನು ಆಸ್ಥೆಯಿಂದ ಮಾಡಿದ್ದಳು ಅಂದರೂ ಸರಿಯೇ.

'ಗುಡ್ ನೈಟ್ ಮಾಮ್ ಅಂಡ್ ಡ್ಯಾಡ್...'

ಕಮ್ಲೂ, ಗಂಟಲಲ್ಲಿ ಏನೋ ಸಿಕ್ಕಾಕೊಂಡಂತೆ ಮುಖ ಹುಳ್ಳಗೆ ಮಾಡಿ, ಹಿಂದಿನ ಒರಟ, ಅಶಿಸ್ತಿನ ಮುದ್ದೆಯಾಗಿದ್ದ ನಕುಲ ಇವನೇನಾ ಎಂಬ ಅನುಮಾನ ಧುತ್ತನೆ.

ಬೆಳಿಗ್ಗೆಯೇ ಶುರುವಾಯಿತು– ಕಾಫಿಲೋಟ ಕೈಗಿಟ್ಟಾಕ್ಷಣ– 'ಥ್ಯಾಂಕ್ಯೂ ಮಾಮ್ ', ತಿಂಡಿಗೂ ಥ್ಯಾಂಕ್ಸ್... ಊಟಕ್ಕೂ ಥ್ಯಾಂಕ್ಸ್... ಹೆಜ್ಜೆ ಹೆಜ್ಜೆಗೂ ಧನ್ಯವಾದಗಳ ಸುರಿಮಳೆಯಲ್ಲಿ ನೆಂದು ಅವಳು ಗೊಂದಲಕ್ಕೀಡಾದಳು.

ಒಂದು ದಿನಕ್ಕೇ ಕಮ್ಲೂಗೆ ಇದು ರೇಜಿಗೆಯೆನಿಸಿ ಕೂಗಾಡಿದಳು. 'ಇದೇನೋ ಮಗನೇ ನಿನ್ನ ಹೊಸ ವರಸೆ... ನಂಗಿವೆಲ್ಲ ಸರಿಬರಲ್ಲ ಕಣೋ...' ಎಂದು ಅವನ ಸ್ವಾಟೆ ತಿವಿದು ಅಲ್ಲಿಂದ ಕಾಲ್ಕಿತ್ತಳು.

ವಾರದಲ್ಲಿ, ಪಕ್ಕದ ಅಂಗಡಿಯಲ್ಲಿದ್ದ ಬಿಸಿಲೇರಿ ವಾಟರ್ ಬಾಟಲುಗಳೆಲ್ಲ ಖಾಲಿಯಾಗಿ, ಇವರ ಮನೆ ಹಿತ್ತಲಲ್ಲಿ ಖಾಲಿ ಬಾಟಲಿನ ದೊಡ್ಡ ಮೂಟೆ ಊದಿಕೊಂಡಿತು. ಇದ್ಯಾಕೋ ಅತಿಯೆನಿಸಿತವಳಿಗೆ.

ಮೊದಲು ರಾಶಿ ಹಸಿ ಮೆಣಸಿನಕಾಯಿ ಅರೆದು ಮಾಡುತ್ತಿದ್ದ ರೊಟ್ಟಿಗೆ ಇನ್ನಷ್ಟು ಖಾರ ಬೇಕೂಂತ ಹಾರಾಡುತ್ತಿದ್ದ ಈ ನಕುಲ, ಈಗ ರೊಟ್ಟಿ ತುದಿ ಮುರಿದು ತಿಂದವನೇ 'ಹೋ' ಅಂತ ಬೊಬ್ಬೆ ಹೊಡೆಯುತ್ತ ಬುಡದಲ್ಲಿ ಬೆಣೆ ಹೊಕ್ಕ ಮಂಗನಂತೆ